ಇಂದು ದಿನಾಂಕಃ 15.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1 ರಿಂದ 5 ನೇದವರ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ಚಿಕ್ಕಪ್ಪ ಬಿದರಿ ಹಾಗೂ ಅವರ ಹೆಂಡತಿ ರುದ್ರವ್ವ ರವರ ಮನೆತನದ ವ್ಯವಹಾರಗಳಲ್ಲಿ ನಾನು ಯಾವತ್ತೂ ಭಾಗೀ ಆಗಿರುವುದಿಲ್ಲ. ಗುಡ್ಡಪ್ಪ ಅರಳಿಕಟ್ಟಿ ರವರ ಮನೆತನದ ವ್ಯವಹಾರಗಳಲ್ಲಿ ನಾನು ಭಾಗೀ ಆಗಿರುವುದಿಲ್ಲ. ಗುಡ್ಡಪ್ಪ ರವರು ತನ್ನ ಮಗಳಾದಂತಹ ರುದ್ರವ್ವ ರವರಿಗೆ ಯಾವ ದಿನಾಂಕದಂದು ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಜನ್ಮದಿನಾಂಕ ನನಗೆ ಗೊತ್ತಿರುವುದಿಲ್ಲ. ನನಗೆ ಈಗ 73 ವರ್ಷ ವಯಸ್ಸು. ನಾನು ಮತ್ತು ವಾದಿ ಮತ್ತು ಪ್ರತಿವಾದಿಯವರು ಬೇರೆ ಬೇರೆ ಜಾತಿಯವರಾಗಿರುತ್ತಾರೆ. ವಾದಿಯರಾಗಲೀ ಪ್ರತಿವಾದಿಯರಾಗಲೀ ನನ್ನನ್ನು ಯಾವುದೇ ವ್ಯವಹಾರಕ್ಕೆ ಕರೆಯುವುದಿಲ್ಲ.

2. ರುದ್ರವ್ವ ರವರು ತನ್ನ ಗಂಡನಿಗೆ ತನ್ನ ಆಸ್ತಿ ಹಕ್ಕು ಬಿಟ್ಟುಕೊಟ್ಟಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ನನಗೆ ತೋರಿಸಿರುವುದಿಲ್ಲ. ದಿನಾಂಕ 04-03-1973 ರಂದು ರುದ್ರವ್ವ ರವರು ತನ್ನ ಹಕ್ಕನ್ನು ತನ್ನ ಗಂಡನಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ 1(ಎ) ದವರ ತಂದೆ ತನಗೆ 1981 ರಂದು ತನ್ನ ಹಕ್ಕನ್ನು ಪುನಃ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ಡ.ನಂ.1443 ಡ.ಎಂದು ಮಂಜೂರಾಗಿರುತ್ತದೆ ಎಂದರೆ ಸರಿ.

3. ಸುಮಾರು 3 ವರ್ಷಗಳ ಹಿಂದೆ ವಾದಿಗೆ ಪಾರ್ಶವಾಯು ಆಗಿರುತ್ತದೆ. ನಾನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ 1 ನೇ ವಾದಿರವರಿಗೆ 1985 ರಲ್ಲಿ ಪಾರ್ಶವಾಯು ಆಗಿದ್ದು ಅವಳು ಮಾತನಾಡುವ ಸ್ಥಿತಿಯಲ್ಲಿ ಇರಲ್ಲಿ ಎಂದು ನಾನು ಹೇಳಿ ಬರೆಸಿರುವುದಿಲ್ಲ. ವಾದಿ 1(ಎ) ರವರ ತಂದೆ ತಾಯಿ ಒಟ್ಟಿಗೆ ಜೀವನ ಮಾಡುತ್ತಿದ್ದರು. ಚಿಕ್ಕಪ್ಪ ರವರು ಜೀವಂತ ಇರುವವರೆಗೂ ಅವರೇ ಮನೆತನದ ಆಳ್ವಿಕೆಯನ್ನು ನಡೆಸುತ್ತಿದ್ದರು. ಆತ ಮೃತಪಟ್ಟ ನಂತರ ವಾದಿಯರು ಮನೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಡ.ನಂ.1253 ನ್ನು ಕಾನೂನು ಬಾಹಿರವಾಗಿ ಚಿಕ್ಕಪ್ಪ ತಂದೆ ಬಸಪ್ಪ ಬಿದರಿ ಹೆಸರಿಗೆ ದಾಖಲು ಮಾಡಿಸಿಕೊಂಡಿರುತ್ತಾರೆ ಎಂಬುದರ ಬಗ್ಗೆ ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ರುದ್ರವ್ವ ರವರು ಸಹಿ ಮಾಡುತ್ತಿದ್ದರೋ ಅಥವಾ ಹೆಬ್ಬೆಟ್ಟನ್ನು ಹಾಕುತ್ತಿದ್ದರು ಎಂದರೆ ಸಾಕ್ಷಿಯು ರುದ್ರವ್ವ ರವರು ಸಹಿ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗಡಿ ಪಂಚಾಯತಿ ವ್ಯವಹಾರಗಳನ್ನು ಮಾಡುವಾಗ ರುದ್ರವ್ವ ರವರು ಸಹಿ ಮಾಡಿರುವುದು ನಾನು ನೋಡಿರುತ್ತೇನೆ. ಸಾಕ್ಷಿಗೆ ಸಾಕ್ಷ ಪ್ರಮಾಣ ಪತ್ರದ 10 ನೇ ಪ್ಯಾರವನ್ನು ಓದಿ

ಹೇಳಲಾಗಿದ್ದು ಆ ರೀತಿ ವಿಚಾರವನ್ನು ನೀವು ಏನಾದರೂ ಹೇಳಿ ಬರೆಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸದರಿ ವಿಚಾರವನ್ನು ನಾನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದು ನುಡಿದಿರುತ್ತಾರೆ.

4. ವಾದಿ 1(ಎ) ರವರ ತಂದೆಯಾದಂತಹ ಚಿಕ್ಕಪ್ಪ ರವರು ಪ್ರತಿವಾದಿ 1 ರಿಂದ 4 ರವರಿಗೆ 12 ಸಾವಿರ ರೂಗಳಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ 1 ರಿಂದ 4 ರವರೇ ಉಳುಮೆಯನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಚಕ್ಕಬಂದಿಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ಹಿಸ್ಸೆ ಮಾಡಿಕೊಂಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಂತರ 37 ಗುಂಟೆ ಜಮೀನನ್ನು ಪ್ರತಿವಾದಿ 4 ರವರು ಪ್ರತಿವಾದಿ 5 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 37 ಗುಂಟೆ ಜಮೀನನ್ನು 5ನೇ ಪ್ರತಿವಾದಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮನಗೆ ಹಾಗೂ ದಾವಾ ಆಸ್ತಿಗೆ 2 ರಿಂದ 3 ಕಿ ಮೀ ಅಂತರ ಇರುತ್ತದೆ. ಸದರಿ ದಾವಾ ಆಸ್ತಿಯ ಕಡೆಗೆ ನಾವು ಹೋಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಸಾಕ್ಷ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯ ಪಕ್ಷಗಾರರ ಬಗ್ಗೆ ಹಾಗೂ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಕೂಡ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.